**ದಿನಾಂಕ 04.02.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ಶ್ರೀ ಎನ್.ಆರ್.ಕೆ. ಪ್ರತಿವಾದಿ ಪರ ವಕೀಲರಿಂದಃ**

ಪ್ರತಿವಾದಿಗಳು ನನ್ನ ಸ್ವಾಧೀನಕ್ಕೆ ತೊಂದರೆಯನ್ನುಂಟು ಮಾಡುತ್ತಿರುವುದರಿಂದ ದಾವೆ ಸಲ್ಲಿಸಿರುತ್ತೇನೆ. ಪ್ರತಿವಾದಿಯವರು ನನ್ನ ಹಾಗೂ ಇತರರ ವಿರುದ್ಧ ಓ.ಎಸ್. 170/2020 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯು ಕೊಳ್ಳೇಗಾಲ ಪಟ್ಟಣದ 2ನೇ ಕ್ರಾಸ್ ವಿದ್ಯಾನಗರ ಬಳಿ ಬರುತ್ತದೆ. ದಾವಾ ಆಸ್ತಿಯ ನಿವೇಶನ ಸಂಖ್ಯೆ 1ಎ ಆಗಿರುತ್ತದೆ. ದಾವಾ ಆಸ್ತಿಯ ಅಳತೆ ಪೂರ್-ಪಶ್ಚಿಮ 40 ಅಡಿ, ಉತ್ತರ-ದಕ್ಷಿಣ 60 ಅಡಿ ಆಗಿರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸೋಮಣ್ಣನವರ ಮನೆ, ಉತ್ತರಕ್ಕೆ ಖಾಲಿ ನಿವೇಶನ, ದಕ್ಷಿಣಕ್ಕೆ ರಸ್ತೆ ಇರುತ್ತದೆ. ದಾವಾ ಆಸ್ತಿಯ ವಿವರವನ್ನು ಇ-ಸ್ವತ್ತಿನ ಆಧಾರದ ಮೇಲೆ ಬರೆಯಿಸಿರುತ್ತೇನೆ. ಸದರಿ ಇ-ಸ್ವತ್ತು 2020ನೇ ಸಾಲಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಅಂತಹ ಸಮಯದಲ್ಲಿ ಸದರಿ ಇ-ಸ್ವತ್ತು ಪುಟ್ಟಮ್ಮನವರ ಹೆಸರಿನಲ್ಲಿತ್ತು. ದಾವಾ ಆಸ್ತಿಯು 1 ರಿಂದ 1ಎ ಆಗಿ ಪೋಡಾಗಿರುವುದರ ಬಗ್ಗೆ ನನಗೆ ಗೊತ್ತಿಲ್ಲ. ನಿವೇಶನ ಸಂಖ್ಯೆ 1 ರಲ್ಲಿ ಒಟ್ಟಾರೆ ಎಷ್ಟು ವಿಸ್ತೀರ್ಣ ಇತ್ತು ಹಾಗೂ ಸದರಿ ನಿವೇಶನವು ಎಷ್ಟು ಭಾಗಗಳಾಗಿ ಪೋಡಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿವೇಶನ ಸಂಖ್ಯೆ 1 ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ನಿವೇಶನ ಸಂಖ್ಯೆ 1ರ ದಾಖಲೆಯನ್ನು ನಾನು ಪಡೆದುಕೊಂಡಿರುವುದಿಲ್ಲ. ನಿವೇಶನ ಸಂಖ್ಯೆ 1 ರ ದಾಖಲೆಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆದುಕೊಳ್ಳಲು ಯಾವುದೇ ಪ್ರಯತ್ನ ಮಾಡಿರುವುದಿಲ್ಲ.

ನನಗೆ ದಾವಾ ಆಸ್ತಿಯನ್ನು ಪುಟ್ಟಮ್ಮ ಅವರ ಮಕ್ಕಳಾದ ಮಾದೇವ, ಪರಶಿವ, ಶಂಕರ ಮತ್ತು ಶಿವಮ್ಮರವರುಗಳು ಕ್ರಯಕ್ಕೆ ನೀಡಿರುತ್ತಾರೆ. ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡುವ ಸಂದರ್ಭದಲ್ಲಿ ಪುಟ್ಟಮ್ಮನವರ ಬಳಿ ದಾವಾ ಆಸ್ತಿಯ ಮಾಲೀಕತ್ವಕ್ಕೆ ಸಂಬಂಧಪಟ್ಟ ದಾಖಲೆಗಳು ಇರುತ್ತವೆ. ಪುಟ್ಟಮ್ಮನವರ ಮಾಲೀಕತ್ವಕ್ಕೆ ಸಂಬಂಧಪಟ್ಟ ದಾಖಲೆ ಇ-ಸ್ವತ್ತು ಆಗಿರುತ್ತದೆ. ಪುಟ್ಟಮ್ಮನವರ ಬಳಿ ಇ-ಸ್ವತ್ತು ದಾಖಲೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಪುಟ್ಟಮ್ಮನವರ ಹೆಸರಿನಲ್ಲಿ 2020ನೇ ಸಾಲಿನ ಪೂರ್ವದಲ್ಲಿ ಎಷ್ಟು ವರ್ಷಗಳಿಂದ ಇ-ಸ್ವತ್ತು ದಾಖಲಾಗಿರುತ್ತದೆ ಎಂದು ಪರಿಶೀಲನೆ ಮಾಡಿರುವುದಿಲ್ಲ. ಪುಟ್ಟಮ್ಮನವರು ಇ-ಸ್ವತ್ತು ದಾಖಲೆ ಪಡೆಯಲು ಸಂಬಂಧಪಟ್ಟ ಅಧಿಕಾರಿಗಳಿಗೆ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಪುಟ್ಟಮ್ಮನವರು ಇ-ಸ್ವತ್ತು ದಾಖಲೆ ಕೋರಿ ಸಲ್ಲಿಸಿದ್ದ ದಾಖಲೆಗಳ ಮಾಹಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ಪುಟ್ಟಮ್ಮನವರು ಕಂದಾಯ ಪಾವತಿ ಮಾಡಿರುವ ಬಗ್ಗೆ ಯಾವುದೇ ಆಧಾರ ಇರುವುದಿಲ್ಲ. 2020ನೇ ಸಾಲಿನ ಪೂರ್ವದಲ್ಲಿ ಪುಟ್ಟಮ್ಮನವರು ಸ್ವಾಧೀನದಲ್ಲಿ ಇರುವ ಬಗ್ಗೆ ಯಾವುದೇ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಪುಟ್ಟಮ್ಮನವರು ನನಗೆ ಅವರ ಮಗ ಪರಶಿವರವರ ಮುಖಾಂತರ ಪರಿಚಯವಾಗಿರುತ್ತಾರೆ. ಪುಟ್ಟಮ್ಮನವರ ಪರಿಚಯ ನನಗೆ ಆದಾಗ ಅವರು ಕೊಳ್ಳೇಗಾಲ ಪಟ್ಟಣದ ಕುರುಬರ ಬೀದಿಯಲ್ಲಿ

ವಾಸವಾಗಿದ್ದರು. ದಾವಾ ಆಸ್ತಿಯ ಖರೀದಿಯ ಪೂರ್ವದಲ್ಲಿ ನನ್ನ ಹಾಗೂ ಪುಟ್ಟಮ್ಮನವರ ನಡುವೆ ಕ್ರಯಕ್ಕೆ ಪಡೆದ ಒಂದು ವರ್ಷದ ಹಿಂದೆ ಕ್ರಯದ ಕರಾರು ಆಗಿರುತ್ತದೆ. ಕ್ರಯದ ಕರಾರನ್ನು ಬರೆದುಕೊಂಡಾಗ ಪುಟ್ಟಮ್ಮನವರಿಂದ ಒಂದು ಪತ್ರವನ್ನು ಪಡೆದುಕೊಂಡಿರುತ್ತೇನೆ. ಸದರಿ ಪತ್ರವು ಪುಟ್ಟಮ್ಮನವರ ಹೆಸರಿನಲ್ಲಿದ್ದ ಕ್ರಯದ ಕರಾರು ಪತ್ರವಾಗಿರುತ್ತದೆ. ಸದರಿ ಕ್ರಯದ ಕರಾರನ್ನು ಪುಟ್ಟಮ್ಮನವರಿಗೆ ಯಾರು ಬರೆದುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯದ ಕರಾರನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಕ್ರಯದ ಕರಾರು ನೋಂದಾಯಿತ ಪತ್ರವಾಗಿತ್ತು. ಸದರಿ ಪತ್ರದ ದೃಢೀಕೃತ ನಕಲನ್ನು ಪಡೆದುಕೊಳ್ಳಲು ನನಗೆ ಯಾವುದೇ ತೊಂದರೆ ಇಲ್ಲ. ಸದರಿ ಕ್ರಯದ ಕರಾರಿನ ದೃಢೀಕೃತ ನಕಲನ್ನು ಹಾಜರುಪಡಿಸಲು ನಾನು ಪ್ರಯತ್ನ ಮಾಡುತ್ತೇನೆ.

ದಾವಾ ಆಸ್ತಿಯ ನಿವೇಶನವನ್ನು ಸರ್ವೆ ನಂಬರ್ 601 ರಲ್ಲಿ ನಿರ್ಮಿಸಲಾಗಿದೆ. ಸರ್ವೆ ನಂಬರ್ 601 ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 601 ಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ. ನಾನು ಹಣ ಹೊಂದಿಸುವ ಸಲುವಾಗಿ ಕ್ರಯದ ಕರಾರನ್ನು ಬರೆದುಕೊಂಡ ಒಂದು ವರ್ಷದ ನಂತರ ಪುಟ್ಟಮ್ಮನವರಿಂದ ಕ್ರಯ ಪತ್ರವನ್ನು ಬರೆಯಿಸಿಕೊಂಡಿರುತ್ತೇನೆ. ಪುಟ್ಟಮ್ಮರವರೊಂದಿಗೆ ಕ್ರಯದ ಕರಾರನ್ನು ಬರೆಯಿಸಿಕೊಳ್ಳುವ ಸಮಯದಲ್ಲಿ ನಾನು, ಪುಟ್ಟಮ್ಮ, ಪುಟ್ಟಮ್ಮನವರ ಮಕ್ಕಳು ಇದ್ದೆವು, ನಮ್ಮನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ